ಮಾಡದೆ ಪಶುಸಂಗೋಪನಾ ಇಲಾಖೆಯ ಅಧಿಕಾರಿಗೆ ಮಾದೇವಯ್ಯ ಫೋನ್ ಹಚ್ಚಿ ವಿಷದೀಕರಿಸಿ ಬಿಕ್ಕುವಾಗ, ಆ ಅಧಿಕಾರಿಯು 'ಸರ್ಕಾರದ ಆದೇಶದಂತೆ ಹತ್ತು ತಿಂಗಳ ಹಿಂದೆಯೇ ಗೋಶಾಲೆಗಳನ್ನು ಮುಚ್ಚಲಾಗಿದೇರಿ. ವಯಸ್ಸಾದ ದನಗುಳ್ನ ನೀವ್ಯಾಕ್ರಿ ಠಾಣೆಯಾಗೆ ಮಡಕ್ಕಂಡದೀರಾ?' ಎಂದು ಖಡಕ್ಕಾಗಿ ಜವಾಬು ನೀಡಿ ಫೋನ್ ಕುಕ್ಕಿದ. ಎಸ್.ಐ.ಗೆ ಇದ್ದ ಒಂದು ಆಶಾಕಿರಣವೂ ಆರಿ ಮೋರೆ ತೊಳೆದ ಕೆಂಡವಾಯಿತು. ಅದೇ ವಾರೊಪ್ಪತ್ತಿನಲ್ಲಿ ಮುದಿ ಎತ್ತು ಒಂದು ನಸುಕಿಗೇ ಅಸುನೀಗಿದ ಸುದ್ದಿಯನ್ನು ಪೇದೆ ಎದ್ದೇನೋ ಬಿದ್ದೇನೋ ಎಂಬಂತೆ ಓಡಿಬಂದು ಬಾಗಿಲು ತಟ್ಟಿ ಎಸ್.ಐ.ನ ನಿದ್ದೆ ಕೆಡಿಸಿ, ಸುದ್ದಿಮುಟ್ಟಿಸಿ ನೆಮ್ಮದಿಯನ್ನು ಕೆಡಿಸಿಬಿಟ್ಟ.

ಸಿಂಬಳ ಸಿಟುತ್ತಾ ಠಾಣೆಗೆ ಬಂದ ಎಸ್.ಐ. ಅದಾಗಲೆ ಊದಿಕೊಂಡಿದ್ದ ದನ, ಅದರ ಕೀವು ರಕ್ತದ ನಾತ ನೋಡಿ ರಾತ್ರಿಯೇ 'ಹೊಂಟೋಗದೆ' ಅಂದುಕೊಂಡವನೇ, 'ಮಾದಾರ್ರಕೇರಿಗೋಗಿ ಯಾರ್ನಾರ ಕರ್ಕೊಂಬಾರ್ಲೆ. ಖುಷಿಯಾಗಿ ತಗೊಂಡು ಹೋಗಿ ಉಣ್ತಾರೆ' ಎಂದು ಪೇದೆಗೆ ಸೂಚಿಸಿದ. ಹಿಂಗೆ ಹೋಗಿ ಹಂಗೆ ಬಂದ ಪೇದೆ, 'ಅವರು ಬರಾಕಿಲ್ಲಂತ್ರಿ ನಾವು ದನ ತಿನ್ನೋದು ಬಿಟ್ಟೀವಿ ಅಂದುರ್ರೀ' ಎಂದು ವರದಿ ಒಪ್ಪಿಸಿದ. 'ಸಾಬರಿಗಾದ್ರೂ ಹೇಳಲೆ' ಅಂದ ಎಸ್.ಐ. ತಾನೇ ಸಾಬರಕೇರಿಗೆ ಹೋಗಿ, 'ನಾನಿದ್ದೀನಿ ಬರ್ರ್ರೋ... ಯಾವನೇನು ಹರ್ಕಣಂಗಿಲ್ಲ' ಎಂದು ಕುಮ್ಮಕ್ಕು ಕೊಟ್ಟರೂ ಸಾಬರು ಸುತ್ರಾಂ ಒಪ್ಪಲಿಲ್ಲ. ಕಡೆಗೆ ಕೂಲಿಯೋರ್ನ ಹಿಡಿದು ಠಾಣೆ ಹಿಂಭಾಗ ದೊಡ್ಡ ಗುದ್ದು ತೋಡಿಸಿ ದನದ ಧಫನ್ ಮಡಲಾಯಿತು. ಹಿಂ.ಜ.ತ. ಸೇನೆಯವರೆಲ್ಲಿ ಬಂದು ಅಟಕಾಯಿಸಿಕೊಳ್ಳುತ್ತಾರೋ ಎಂಬ ಭಯದ ನೆರಳಲ್ಲೇ ಎಲ್ಲಾ ಸಾಂಗೋಪಾಂಗವಾಗಿ ನಡೆದರೂ ಒಬ್ಬರ ಸುಳಿವಿಲ್ಲ. ದೂರದಿಂದಲೇ ನೋಡಿಕೊಂಡು ಹೋದವರೇ ಹೆಚ್ಚು. ಪೇದೆ ಶಾಸ್ತ್ರಿಯು ಸಮಾಧಿಗೆ ಹೂ ಇಟ್ಟು ಪೂಜಿಸುವಾಗ ಎಸ್.ಐ.ಗೆ ಜಾಡಿಸಿ ಒದೆಯಬೇಕೆನಿಸಿತು. ಸದ್ಯಕ್ಕೆ ಸಮಾಧಾನವಾದರೂ ಮುಂದೇನು ಎಂಬ ಪ್ರಶ್ನೆ ಕಾಡದಿರಲುಂಟೆ.

ಎಸ್.ಐ. ಮಾದೇವಯ್ಯನಿಗೆ ಊಟ ಸೇರಂಗಿಲ್ಲ ನಿದ್ದೆ ಹತ್ತಂಗಿಲ್ಲ. ಹಗಲು ಹೊತ್ತೇ ಠಾಣೆಯಲ್ಲಿ ಪೊಗದಸ್ತಾಗಿ ಗೊರಕೆ ಹೊಡೆಯುವಷ್ಟು ಭಾಗ್ಯದಾತನಾದ ಆತ ಇಂದು ಅನಾಥ. ಅನಾಥ ಪ್ರಜ್ಞೆಯಿಂದ ನರಳುತ್ತಾ ಒಬ್ಬನೇ ಮಾತನಾಡಿಕೊಳ್ಳುತ್ತಾ ಮನೋರೋಗಿಯ ಗೆಟ್‌ಅಪ್‌ನಲ್ಲಿ ಅಡ್ಡಾಡುವಂತಾದ. ಮನೆಗೆ ಬಂದರೂ ಮೂಗಿನಲ್ಲಿ ಸದಾ ಸೆಟ್ಲ್ ಆಗಿರುವ ಸಿಂಬಳ ಜೊತೆಗೆ ಅಡರಿದ್ದ ಗಂಜಲವಾಸನೆ ಹಿಂಗಂಗಿಲ್ಲ. ಕಿವಿಗಳಲ್ಲಿನ ದನಗಳ ಸೊರಬರ ಉಸಿರಾಟ ತಗ್ಗಂಗಿಲ್ಲ. ಇಂತಹ ವನವಾಸದ ಒಂದು ದಿನ ಠಾಣೆಯಲ್ಲಿ ಎಸ್.ಐ. ಸಾಹೇಬ ಸೊಳ್ಳೆ ಹೊಡೆಯುತ್ತಾ ಎಣ್ಣೆ ಹೊಡೆಯುತ್ತಿದ್ದಾಗಲೇ ಹಳೆ ಗೆಳೆಯ ಲಾಯರನೊಬ್ಬ ಅಚಾನಕ್ ಆಗಿ ಬಂದ. ಟೀವಿ ಛಾನಲ್‌ಗಳಲ್ಲಿ 'ಮೊಬ್ಬಳ್ಳಿ ಠಾಣೆ ಈಗ ಗೋಶಾಲೆ' ಎಂಬ ಸ್ಟೋರಿ ನೋಡಿ ಗೆಳೆಯನ ಬಗ್ಗೆ ಉಂಟಾದ ಮರುಕವೂ ಕಾರಣವಾಗಿದ್ದೀತು. ಗೆಳೆಯ ಬಂದು ಹಳೆ ಪ್ರಕರಣವನ್ನು ಕೋಳಿಯಂತೆ ಕೆದಕಿದಾಗ ದುಃಖಿತಪ್ತನಾದ ಎಸ್.ಐ. ಮಾದೇವಯ್ಯ ತನಗೆ ಬಂದಪ್ಪಳಿಸಿದ ಸಂಕಷ್ಟಗಳ ಸರಮಾಲೆಯನ್ನು ಬಿಚ್ಚಿ ಹರವುತ್ತಾ ಕಣ್ಣೀರ ಕಡಲಾದ. ಕವ್ ಕವ್ ಎಂದು ಶೀನಿ ಸಿಂಬಳ ಸೀಟಿ ಗೋಡೆಯತ್ತ ಬಿಸಾಟಿದ. ತಣ್ಣಗೆ ಎಲ್ಲವನ್ನೂ ಕೇಳಿದ ಲಾಯರ್ ಎಣ್ಣೆ ಪ್ರಭಾವ ಹೆಚ್ಚಾಗಿ ಅವನ ಕಣ್ಣನ್ನು ಇವನು ವರೆಸುತ್ತಾ ಇಬ್ಬರೂ ಒಂದೇ ಪಿಲೇಟಿನಲ್ಲಿ ಚಿಕನ್ ಫ್ರೈ, ಕಬಾಬ್ ಅಗಿಯುತ್ತಾ ಪರಿಹಾರಾರ್ಥವಾಗಿ ಹಪಹಪಿಸಿದರು. ಏನಾದರೂ ಪರಿಹಾರ ದೊರಕೀತೇನೋ ಎಂದು ಪೇದೆಗಳೂ ಸಹ ನಿದ್ದೆಗೆ ಜಾರದೆ ಸೊಳ್ಳೆಗಳ ಬೇಟೆಯಾಡುತ್ತಾ ಕಿವಿದೆರೆದರು.

ಎರಡು ದಿನ ಕಳೆಯುವುದರಲ್ಲಿ ಠಾಣೆಯ ಆವರಣದಲ್ಲಿ ಸೆಗಣಿಯೂ ಇಲ್ಲ ಗಂಜಲೂ ಇಲ್ಲ!